ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು.

794(567) ಶ್ರೀ ಕರಡಿ ಸಂಗಣ್ಣ ಅಮರಪ್ಪ:(ಕೊಪ್ಪಳ) ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 63ರ ಹೊಸಪೇಟೆ ವೀರಭದ್ರೇಶ್ವರ ವಯಾ ಬಾನಾಪುರ ಕ್ರಾಸ್‌ವರೆಗೆ ಸಾರ್ವಜನಿಕರು, ರೈತರು ಮತ್ತು ವಿದ್ಯಾರ್ಥಿಗಳಿಗೆ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ)ಹಾಗಿದ್ದಲ್ಲಿ, ಸಂಚಾರ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಡಾ ವಿ ಎಸ್ ಆಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು)

ಅ) ಹೌದು

ಆ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:63 ರಸ್ತೆಯು ಹೊಸಪೇಟೆಯ ಬಳಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13ರ ರಸ್ತೆಗೆ ಕೂಡಿ ನಂತರ ವಿಂಗಡಣೆಯಾಗಿ ಹೋಗುತ್ತಿದ್ದು ಇದರಿಂದ ವಾಹನಗಳ ಸಾಂದ್ರತೆ ಹೆಚ್ಚಾಗಿ ಜಾಮ್ ಆಗಿ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಸಂಚಾರ ಸುಗಮಕ್ಕೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿರುತ್ತದೆ:

1.ಜಾಮ್ ಆದಾಗ ಹೊಸಪೇಟೆ ಸಂಚಾರಿ ಪೊಲೀಸ್ ಠಾಣೆ ಸಿಬ್ಬಂದಿ ಮತ್ತು ಮರಿಯಮ್ಮನ ಹಳ್ಳಿಯ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಿ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

2.ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13ರ ರಸ್ತೆಯನ್ನು ಚಥುಷ್ಪದ ರಸ್ತೆಯನ್ನಾಗಿ ಮಾರ್ಪಾಡು ಮಾಡುವ ಕುರಿತು ಇಗ ಸರ್ವೆ ಕಾರ್ಯ ನಡೆಸಲಾಗಿರುತ್ತದೆ.

3.ಸಂಚಾರ ತೊಂದರೆಯನ್ನು ನಿವಾರಿಸಲು ರಾಷ್ಟ್ರೀಯ ಹೆದ್ದಾರಿ ಲೊಕೋಪಯೋಗಿ ಇಲಾಖೆಯವರು ರಸ್ತೆ ಅಗಲೀಕರಣದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.

4.ರಸ್ತೆ ಅಗಲೀಕರಣವಾದ ನಂತರ ಸಾರ್ವಜನಿಕ ಮತ್ತು ರೈತರಿಗೆ ಹಾಗೂ ವಿದ್ಯಾರ್ಥಿಗಳ ವಾಹನ ಸಂಚಾರಕ್ಕೆ ಅನುಕೂಲವಾಗುತ್ತದೆ.

ಹೆಚ್‌ಡಿ 336 ಎಸ್‌ಎಸ್‌ಟಿ 2010

ಕರಾವಳಿ ರಕ್ಷಣಾ ಪಡೆಯು ಆಧುನೀಕರಣ

795(1335) ಶ್ರೀ ಯು ಟಿ:(ಮಂಗಳೂರು) ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ರಾಜ್ಯದ ಕರಾವಳಿ ರಕ್ಷಣಾ ಪಡೆಯನ್ನು ಯಾವಾಗ ಪ್ರಾರಂಭಿಸಲಾಯ್ತು

ಆ ಈ ಕರಾವಳಿ ರಕ್ಷಣಾ ಪಡೆಯನ್ನು ಆಧುನೀಕರಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು;

ಇ ಕರಾವಳಿ ರಕ್ಷಣಾ ಪಡೆಯನ್ನು ಆಧುನೀಕರಣಗೊಳಿಸಲು ರಾಜ್ಯ ಸರ್ಕಾರವು.ಹಣವನ್ನು ಮೀಸಲಿರಿಸಿದೆಯೇ;

ಈ ಈ ಯೋಜನೆಗೆ ಕೇಂದ್ರ ಸರ್ಕಾರವು ಅನುದಾನ ನೀಡುವುದೇ; ಹಾಗಿದ್ದಲ್ಲಿ ಅನುದಾನದ ಪ್ರಮಾಣವೆಷ್ಟು?

ಶ್ರೀ ಡಾ ವಿ ಎಸ್ ಆಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು)

ಅ ರಾಜ್ಯದ ಕರಾವಳಿ ಕಾವಲು ಪೊಲೀಸ್ ಘಟಕವನ್ನು ಎಪ್ರಿಲ್ 1999ರಲ್ಲಿ ಪ್ರಾರಂಭಿಸಲಾಯಿತು.

ಆ ಕರಾವಳಿ ಕಾವಲು ಪೊಲೀಸ್ ಘಟಕವನ್ನು ಆಧುನೀಕರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ;

1. ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಯ ಕರಾವಳಿ ವ್ಯಾಪ್ತಿಯಲ್ಲಿ ಈಗಾಗಲೇ 5 ಕರಾವಳಿ ಕಾವಲು ಪೊಲೀಸ್ ಠಾಣೆಗಳನ್ನು ಮಂಜೂರಿ ಮಾಡಲಾಗಿದ್ದು, ಅವುಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೇ ಹೆಚ್ಚುವರಿಯಾಗಿ 2 ಪೊಲೀಸ್ ಉಪವಿಭಾಗ, 4 ಪೊಲೀಸ್ ಠಾಣೆ, 30